**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೊನ್ನಾಳಿ .**

**ಸಿಸಿ.ನಂ.443/2021**

ಪಿರ್ಯಾದಿ : ಕರ್ನಾಟಕ ಸರಕಾರದ ಪರವಾಗಿ,
ಹೊನ್ನಾಳಿ ಪೋಲೀಸ ಠಾಣೆ,
ಹೊನ್ನಾಳಿ .

**ವಿರುದ್ಧ**

ಆರೋಪಿತರ ಹೆಸರು : 1. ಗಿರೀಶ ಜಿ ಕೆ ಬಿನ್ ಕೆಂಚಪ್ಪ
ವಯಸ್ಸುಃ 23 ವರ್ಷ, ಉದ್ಯೋಗಃ ಚಾಲಕ,
ವಾಸಃ ತಿಮ್ಲಾಪುರ ಗ್ರಾಮ
ಹರಿಹರ ತಾಲ್ಲೂಕು.
2. ರಾಜಪ್ಪ (**Abated**)

**ದಂಡ ಪ್ರಕ್ರಿಯೇ ಸಂಹಿತೆ ಕಲಂ.313 ರ ಪ್ರಕಾರ 1 ನೇ ಆರೋಪಿತನ ಹೇಳಿಕೆಗಳು**

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರಃ

ಪ್ರಶ್ನೆ2. ಪ್ರಾಸಾ-1/ಚಾಸಾ-1 ರವರಾದ ಮಂಜುನಾಥ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 05-10-2020 ರಂದು ಹೊನ್ನಾಳಿಯಿಂದ ಸೊರಟೂರಿಗೆ ಹೋಗುವ ರಸ್ತೆಯ ಮಧ್ಯದಲ್ಲಿ ಬರುವ ನೀರಾವರಿ ಇಲಾಖೆಯ ಹ್ಯಾಂಡ್ ಪೋಸ್ಟ ಹತ್ತಿರ ಆತನ ತಂದೆಯಾದ 2 ನೇ ಆರೋಪಿಯು ಚಲಾಯಿಸುತ್ತಿದ್ದ ಮೋಟಾರ್ ಬೈಕ್ ಅಪಘಾತವಾಗಿರುವ ಸುದ್ದಿ ತಿಳಿದ ಬಗ್ಗೆ ಮತ್ತು ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮೆಗಾನ್ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅವರು ಚಿಕಿತ್ಸೆ ಫಲಿಸದೇ ಮೃತಪಟ್ಟ ಕಾರಣದಿಂದ ಅಪಘಾತವು ಲಾರಿಚಾಲಕನಾದ ನೀವು ನಿಮ್ಮ ಲಾರಿಯನ್ನು ಅತೀಜೋರು ಮತ್ತು ನಿರ್ಲಕ್ಷತನದಿಂದ ಚಲಾಯಿಸಿದ್ದರಿಂದ ಆಗಿತ್ತು ಎಂಬ ಬಗ್ಗೆ ಪೋಲಿಸರಿಗೆ ನಿಪಿ1 ರಂತೆ ದೂರುಕೊಟ್ಟ ಬಗ್ಗೆ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೇ ?

ಉತ್ತರಃ

ಪ್ರಶ್ನೆ3. ಪ್ರಾಸಾ-3/ಚಾಸಾ-3 ರವರಾದ ಚನ್ನಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ 2 ನೇ ಆರೋಪಿಯ ಬೈಕಿನಲ್ಲಿ ತಾನು ಮತ್ತು ಚಾಸಾ-2 ರವರು ಹೊನ್ನಾಳಿಯಿಂದ ಸೊರಟೂರಿಗೆ ಹೋಗುತ್ತಿದ್ದಾಗ ಶಿಕಾರಿಪುರ ರಸ್ತೆಯ ಹ್ಯಾಂಡ್ ಪೋಸ್ಟ್ ಹತ್ತಿರ ಅಪಘಾತವಾದ ಬಗ್ಗೆ ಮತ್ತು ಅಪಘಾತವು ಲಾರಿಯ ಚಾಲಕನಾದ ನಿಮ್ಮ ತಪ್ಪಿನಿಂದ ಆಗಿರುತ್ತದೆಂದು ಮತ್ತು ಆ ಅಪಘಾತದ ಪರಿಣಾಮ ಅವರಿಗೆ ಹಾಗೂ ಚಾಸಾ-2 ರವರಿಗೆ ತೀವ್ರ ಸ್ವರೂಪದ ಗಾಯಗಳಾದ ಬಗ್ಗೆ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೇ?

ಉತ್ತರಃ

ಪ್ರಶ್ನೆ4. ಪ್ರಾಸಾ-4/ಚಾಸಾ-5 ರವರಾದ ರಾಮನಗೌಡ ಜಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 05-10-2020 ರಂದು ಹೊನ್ನಾಳಿಯಲ್ಲಿ ಕೆಲಸವನ್ನು ಮುಗಿಸಿಕೊಂಡು ಬೈಕ್ ನಂ.ಕೆಎ-14/ಎಲ್-1001 ರಲ್ಲಿ ಚಾಸಾ-2 ಮತ್ತು 3 ರವರನ್ನು ಕೂರಿಸಿಕೊಂಡು ಬರುವಾಗ 1 ನೇ ಆರೋಪಿಯಾದ ನೀವು ಕೆಎ-27/ಎ-4423 ನೇ ಲಾರಿಯನ್ನು ಹೊನ್ನಾಳಿ ಕಡೆಯಿಂದ ನೀರಾವರಿ ಇಲಾಖೆಯ ಹ್ಯಾಂಡ್ ಪೋಸ್ಟ ಹತ್ತಿರ ಯುಟರ್ನ್ ಮಾಡಿಕೊಳ್ಳುತ್ತಿದ್ದಾಗ 2 ನೇ ಆರೋಪಿ ಚಾಲನೆ ಮಾಡುತ್ತಿದ್ದ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-2 ರವರ ಎದೆಗೆ ಮತ್ತು ಕೈ ಕಾಲುಗಳಿಗೆ, 2 ನೇ ಆರೋಪಿಗೆ ಎದೆಗೆ ಮತ್ತು ಸೊಂಟದ ಕೆಳಭಾಗದಲ್ಲಿ, ಚಾಸಾ-3 ರವರಿಗೆ ತಲೆಗೆ ಪೆಟ್ಟಾಗಿದ್ದು ನಂತರ 112 ಪೊಲೀಸರಿಗೆ ಫೋನ್ ಮಾಡಿ ನಂತರ ಪೊಲೀಸರು 2 ನೇ ಆರೋಪಿಯನ್ನು ತಮ್ಮ ಕಾರಿನಲ್ಲಿ, ಚಾಸಾ-2 ಮತ್ತು 3 ರವರನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಮತ್ತು ಅಪಘಾತಪಡಿಸಿದಾಗ ಲಾರಿಯನ್ನು ನಿಲ್ಲಿಸು ಎಂದರೂ ಸಹ ನೀವು ನಿಲ್ಲಿಸದೇ ಮುಂದೆ ಹೋಗಿದ್ದಾಗಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೇ?

ಉತ್ತರಃ

ಉತ್ತರಃ

ಪ್ರಶ್ನೆ5. ಪ್ರಾಸಾ-9/ಚಾಸಾ-24 ರವರಾದ ಜಿ ಎನ್ ಮಾಲತೇಶಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ಕೊಟ್ಟ ದೂರನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡ ಬಗ್ಗೆ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೇ?

ಉತ್ತರಃ

ಪ್ರಶ್ನೆ6. ಪ್ರಾಸಾ-10/ಚಾಸಾ-25 ರವರಾದ ದೇವರಾಜ್ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-24 ರವರಿಂದ ಪ್ರಕರಣದ ತನಿಖೆಯನ್ನು ವಹಿಸಿಕೊಂಡ ನಂತರ ತನಿಖೆ ಮಾಡಿದಾಗ ಸದರಿ ಅಪಘಾತವು ಲಾರಿ ಚಾಲಕನಾದ ನಿಮ್ಮ ತಪ್ಪಿನಿಂದಲೇ ಮತ್ತು ಅಜಾಗರೂಕ ಚಾಲನೆಯಿಂದಲೇ ಅವರ ತನಿಖೆಯಲ್ಲಿ ಸಾಕ್ಷ್ಯದಾರಗಳು ಕಂಡು ಬಂದಿದ್ದಾಗಿ ಮತ್ತು ಆ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೇ?

ಉತ್ತರಃ

ಪ್ರಶ್ನೆಃ 7. ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆಃ 8. ನೀವು ಸಾಕ್ಷಿ ವಿಚಾರಣೆ ಮಾಡಬಯಸುತ್ತೀರಾ?

ಉತ್ತರಃ

(ಮೇಲಿನ ಪ್ರಶ್ನೆಗಳನ್ನು 1 ನೇ ಆರೋಪಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವ ಅಕ್ಷರಗಳಲ್ಲಿ ಬರೆದುಕೊಂಡೆ ಎಂದು ದೃಡಿಕರಿಸುತ್ತೇನೆ.)

ದಿನಾಂಕಃ 23.06.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಹೊನ್ನಾಳಿ .

ಆರೋಪಿ.1 ರವರ ಸಹಿ -